# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಬಿ12(5ಜಿ)ಪಿಆರ್/206/2019-20

ಆಯುಕ್ತರವರ ಕಛೇರಿ,
ಬೃಹತ್ ಮಹಾನಗರ ಪಾಲಿಕೆ ಕಛೇರಿಗಳು,
ಬೆಂಗಳೂರು, ದಿನಾಂಕ: 1|2|2020

## ಕಛೇರಿ ಆದೇಶ

ವಿಷಯ: ಖಾಯಂ ಗ್ರೂಪ್ ಡಿ ವೃಂದದ ನೌಕರರುಗಳಿಗೆ ಸೇವಾ ಪುಸ್ತಕಗಳನ್ನು ಸ್ಥಳದಲ್ಲಿಯೇ ಒದಗಿಸುವ ಸಂಬಂಧ ತಂಡಗಳನ್ನು ರಚಿಸುವ ಬಗ್ಗೆ.

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ದಕ್ಷಿಣ, ಬೊಮ್ಮನಹಳ್ಳಿ, ಮಹದೇವಪುರ, ಮತ್ತು ಯಲಹಂಕ ವಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರೂಪ್ ಡಿ ವೃಂದದ ನೌಕರರುಗಳಿಗೆ ಈ ಕೆಳಕಂಡ ಸೇವಾ ಸೌಲಭ್ಯಗಳನ್ನು ಸ್ಥಳದಲ್ಲಿಯೇ ಒದಗಿಸುವ ಸಂಬಂಧ ಮಾನ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ರವರ ನೇತೃತ್ವದಲ್ಲಿ ದಿನಾಂಕ: 06-02-2020 ಮತ್ತು 07-02-2020 ಗಳಂದು ಪಾಲಿಕೆಯ ಕೇಂದ್ರ ಕಛೇರಿಯಲ್ಲಿರುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಿ / ನೌಕರರ ಭವನದಲ್ಲಿ ಅದಾಲತ್ತನ್ನು ಹಮ್ಮಿಕೊಳ್ಳಲಾಗಿರುತ್ತದೆ.

1. ಸೇವಾಪುಸ್ತಕವನ್ನು ಅಪ್‌ಡೇಟ್ ಮಾಡುವ ಬಗ್ಗೆ.
2. ವಾರ್ಷಿಕ ವೇತನ ಬಡ್ತಿ ಮತ್ತು ಇತರೇ ವೇತನ ಬಡ್ತಿಗಳ ಬಗ್ಗೆ.
3. ಪರೀಕ್ಷಾರ್ಥ ಸೇವಾವಧಿ ಘೋಷಣೆ ಬಗ್ಗೆ.
4. ವೈದ್ಯಕೀಯ ವೆಚ್ಚ ಮರುಪಾವತಿ ಪ್ರಕರಣಗಳ ಬಗ್ಗೆ.
5. 4ನೇ ದರ್ಜೆ ನೌಕರರುಗಳ ಇತರೇ ವಿಷಯಗಳು

ಸದರಿ ಅದಾಲತ್ತಿಗೆ ಆಯುಕ್ತರ ಕಛೇರಿಯ ಆಡಳಿತ ಶಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಈ ಕೆಳಕಂಡ ಅಧಿಕಾರಿ / ನೌಕರರುಗಳನ್ನು ನೇಮಿಸಿದೆ.

| ಕ್ರ.ಸಂ. | ಟೇಬಲ್ ವಿವರಗಳು | ತಂಡಕ್ಕೆ ನಿಯೋಜಿಸಲಾದ ಸಿಬ್ಬಂದಿಗಳ ವಿವರಗಳು | | | ತಂಡದ ಮೇಲುಸ್ತುವಾರಿಯ ಜವಾಬ್ದಾರಿ |
|---|---|---|---|---|---|
| | | ವಿಷಯ ನಿರ್ವಾಹಕರ ಹೆಸರು ಮತ್ತು ಪದನಾಮ | ನಾಲ್ಕನೇ ದರ್ಜೆ ನೌಕರರ ಹೆಸರು | ಕಂಪ್ಯೂಟರ್ ಆಪರೇಟರ್ ಹೆಸರು | |
| 1. | ಟೇಬಲ್-1 | ಶ್ರೀ ಟಿ. ನಾಗರಾಜು ಪ್ರ.ದ.ಸ | ಶ್ರೀ ಲೋಕೇಶ್ | ಶ್ರೀ ವೆಂಕಟಸ್ವಾಮಿ | ಶ್ರೀ ಹೆಚ್.ಸುರೇಶ, ಸ.ಕಂ.ಅ ಹಾಗೂ ವ್ಯವಸ್ಥಾಪಕರು-1 ಮತ್ತು ಶ್ರೀ ಪಿ.ನಾಗರಾಜ ವ್ಯವಸ್ಥಾಪಕರು |
| 2. | ಟೇಬಲ್-2 | ಶ್ರೀ ಮಹೇಶ್ ಪ್ರ.ದ.ಸ | | | |
| 3. | ಟೇಬಲ್-3 | ಶ್ರೀ ಲಕ್ಷ್ಮೀನಾರಾಯಣ ಪ್ರ.ದ.ಸ | ಶ್ರೀ ನರೇಂದ್ರ | ಶ್ರೀ ಸಿ. ಗೋಪಿ | |
| 4. | ಟೇಬಲ್-4 | ಶ್ರೀ ವಿ. ಕಾರ್ತೀಕ್ ಪ್ರ.ದ.ಸ | | | |
| 5. | ಟೇಬಲ್-5 | ಶ್ರೀ ಪುಟ್ಟರಾಜು, ಪ್ರ.ದ.ಸ | ಶ್ರೀ ರಾಕೇಶ್ | ಶ್ರೀ ಪ್ರವೀಣ್ | |

ಶ್ರೀ ಶ್ರೀನಿವಾಸಲು, ಉಪ ನಿಯಂತ್ರಕರು (ಹಣಕಾಸು-ಕೇಂದ್ರ) ರವರನ್ನು ಸದರಿ ಅದಾಲತ್ತಿನಲ್ಲಿ ಕಡ್ಡಾಯವಾಗಿ ಹಾಜರಿರಬೇಕೆಂದು ಸೂಚಿಸಿದೆ.

ಸದರಿ ಕಾರ್ಯಕ್ರಮಕ್ಕೆ ಅಗತ್ಯವಿರುವ ಟೇಬಲ್, ಕುರ್ಚಿ, ಬಟ್ಟೆ ಮತ್ತು ಬ್ಯಾನರ್ ವ್ಯವಸ್ಥೆ ಮಾಡಲು ಕಾರ್ಯಪಾಲಕ ಅಭಿಯಂತರರು (ಎಂ.ಪಿ.ಇ.ಡಿ) ರವರಿಗೆ ಹಾಗೂ ಕಾಫಿ, ಟೀ ಮತ್ತು ನೀರಿನ ವ್ಯವಸ್ಥೆ ಮಾಡಲು ಸಾರ್ವಜನಿಕ ಸಂಪರ್ಕಾಧಿಕಾರಿ ರವರಿಗೆ ಸೂಚಿಸಿದೆ.

ಆರೋಗ್ಯ ವೈದ್ಯಾಧಿಕಾರಿ / ನೋಡಲ್ ಅಧಿಕಾರಿ, ಮ್ಯಾನೇಜ್ಡ್ ಹೆಲ್ತ್ ಕೇರ್ ರವರಿಗೆ ಅಗತ್ಯ ಸಿಬ್ಬಂದಿಗಳೊಂದಿಗೆ ದಿನಾಂಕ: 06-02-2020 ಮತ್ತು 07-02-2020ರ ವರೆಗೆ ಕಡ್ಡಾಯವಾಗಿ ಹಾಜರಿದ್ದು, ನಾಲ್ಕನೇ ದರ್ಜೆ ನೌಕರರುಗಳಿಗೆ ಸಂಬಂಧಿಸಿದ ವೈದ್ಯಕೀಯ ಕಡತಗಳಿದ್ದಲ್ಲಿ ಅವುಗಳ ಕೂಡಲೇ ನಿಯಮಾನುಸಾರ ಪರಿಶೀಲಿಸಿ, ಸ್ಥಳದಲ್ಲಿಯೇ ವಿಲೇವಾರಿ ಮಾಡುವುದು.

ಸದರಿ ಕಾರ್ಯಕ್ರಮದ ಸಂಪೂರ್ಣ ಮೇಲುಸ್ತುವಾರಿಯನ್ನು ಡಾ|| ಬಿ.ಆರ್. ಹರೀಶ್, ಕ.ಆ.ಸೇ., ಸಹಾಯಕ ಆಯುಕ್ತರು (ಆಡಳಿತ-1) ಮತ್ತು ಶ್ರೀ ಎನ್. ಶ್ರೀನಿವಾಸ್, ಸಹಾಯಕ ಆಯುಕ್ತರು (ಆಡಳಿತ-2) ರವರು ನೋಡಿಕೊಳ್ಳುವುದು.

ಮಾನ್ಯ ಆಯುಕ್ತರವರ ಆದೇಶದಂತೆ)

ಉಪ ಆಯುಕ್ತರು (ಆಡಳಿತ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
1/2/2020

ಪ್ರತಿಯನ್ನು: ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ವಿಶೇಷ ಕರ್ತವ್ಯಾಧಿಕಾರಿ ರವರಿಗೆ ಕಳುಹಿಸಿದೆ.

: ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಆಪ್ತಕಾರ್ಯದರ್ಶಿ ರವರಿಗೆ ಕಳುಹಿಸಿದೆ.

: ವಿಶೇಷ ಆಯುಕ್ತರು (ಯೋಜನೆ/ಹಣಕಾಸು) ರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.

: ಅಪರ ಆಯುಕ್ತರು (ಆಡಳಿತ) ರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.

: ಕೌನ್ಸಿಲ್ ಕಾರ್ಯದರ್ಶಿರವರಿಗೆ ಕಳುಹಿಸುತ್ತಾ, ಎಲ್ಲಾ ಸ್ಥಾಯಿ ಸಮಿತಿಯ ಅಧ್ಯಕ್ಷರುಗಳಿಗೆ, ಆಡಳಿತ ಪಕ್ಷದ ನಾಯಕರು, ವಿರೋಧ ಪಕ್ಷದ ನಾಯಕರುಗಳಿಗೆ ಕಳುಹಿಸಿಕೊಡಲು ಕೋರಿದೆ.

: ಸಂಬಂಧಪಟ್ಟ ವಲಯಗಳ ಅಪರ / ಜಂಟಿ ಆಯುಕ್ತರು ರವರುಗಳಿಗೆ ಮಾಹಿತಿಗಾಗಿ ಕಳುಹಿಸಿದೆ.

: ಕಾರ್ಯಪಾಲಕ ಅಭಿಯಂತರರು (ಎಂ.ಪಿ.ಇ.ಡಿ) ರವರಿಗೆ ಕಳುಹಿಸಿದೆ.

: ಆರೋಗ್ಯ ವೈದ್ಯಾಧಿಕಾರಿ / ನೋಡಲ್ ಅಧಿಕಾರಿ, ಮ್ಯಾನೇಜ್ಡ್ ಹೆಲ್ತ್ ಕೇರ್ ರವರಿಗೆ ಕಳುಹಿಸಿದೆ.

: ಸಾರ್ವಜನಿಕ ಸಂಪರ್ಕಾಧಿಕಾರಿ ರವರಿಗೆ ಕಳುಹಿಸಿದೆ.

: ಮುಖ್ಯ ಲೆಕ್ಕಾಧಿಕಾರಿ / ಮುಖ್ಯ ಲೆಕ್ಕಪರಿಶೋಧಕರು / ಉಪ ನಿಯಂತ್ರಕರು (ಹಣಕಾಸು-ಕೇಂದ್ರ) ರವರಿಗೆ ಕಳುಹಿಸಿದೆ.

: ಕಛೇರಿ ಪ್ರತಿ.